

## ಕಳಲೆಯ ಗುಟ್ಟು, ಬಾವಿಯ ಗಂಟು

ಹೊಸನಗರ ಎಸ್.ಎನ್.ರಸ್ತೆ ನಿವಾಸಿ ಲಕ್ಷ್ಮೀ ದೇವಮ್ಮರ ಮನೆಗೆ ಕಾರ್ಯನಿಮಿತ್ತವಾಗಿ ಹೋಗಿದ್ದೆ. ಅವರು ತಮ್ಮ ಮನೆಯ ಅಂಗಳದಲ್ಲಿದ್ದ ಬಾವಿಯಲ್ಲಿ ನೀರೆತ್ತಲು ಕೊಡಪಾನದ ಬದಲಾಗಿ ಬಟ್ಟೆಯ ಗಂಟೊಂದನ್ನು ಹಗ್ಗದ ಕುಣಿಕೆಗೆ ಬಿಗಿದು ಬಿಡುತ್ತಿದ್ದರು.

ಆಶ್ಚರ್ಯದಿಂದ ಅವರನ್ನು ಪ್ರಶ್ನಿಸಿದೆ. ಅದಕ್ಕವರು, 'ಕಳಲೆಯ (ಎಳೆ ಬಿದಿರು) ಒಗರು ಹಾಗೂ ಕಹಿ ಅಂಶವನ್ನು ಹೊರ ತೆಗೆಯಲು ಹೀಗೆ ಮಾಡುತ್ತಿದ್ದೇನೆ' ಎಂದರು. ಕಳಲೆ ಗಂಟನ್ನು ಬಾವಿಯ ನೀರಿನಲ್ಲಿ ಮೂರು ದಿನ ನೆನೆ ಇಟ್ಟರೆ, ಅದರಲ್ಲಿನ ಕಹಿ ಅಂಶವು ಮಂಗ ಮಾಯವಾಗುತ್ತೆ. ಅದಕ್ಕಾಗಿ ಪ್ರತಿ ದಿನ ಗಂಟನ್ನು ಮೇಲೆತ್ತಿ ಬಟ್ಟೆಯ ನೀರನ್ನು ಹಿಂಡಿ ಮತ್ತೆ ಕಳಲೆಯ ಗಂಟನ್ನು ನೀರಿಗೆ ಬಿಡಬೇಕು ಅನ್ನೋದು ಅವರ ವಿವರಣೆ. ಮಲೆನಾಡಿನ ಹೆಚ್ಚಿನ ಮನೆಗಳಲ್ಲಿ ಬಾವಿಗಳಿದ್ದು, ಈ ಪದ್ಧತಿ ಎಲ್ಲೆಡೆ ಇತ್ತು ಅನ್ನೋದೂ ಅವರ ಮಾತು. ಬಾವಿ ನೀರಿನಲ್ಲಿ ಸೇರಿಕೊಳ್ಳುವ ಅಗೋಚರ ಕ್ರಿಮಿಗಳ ನಿವಾರಣೆಗೆ ಕಳಲೆಯ ಕಹಿ ನೀರು ಸಹ ಉಪಯುಕ್ತವಂತೆ.

**–ನಗರ ಗುರುದೇವ್ ಭಂಡಾರ್ಕರ್, ಹೊಸನಗರ**





## 'ಘಟಪ್ರಭೆ'ಯೊಡಲಲ್ಲಿದ್ದ 'ವಿಠ್ಠಲ' ದರ್ಶನ

ಹಿಡಕಲ್ ಡ್ಯಾಂ ನಿರ್ಮಾಣದಿಂದ 'ಘಟಪ್ರಭೆ'ಯ ಒಡಲು ಸೇರಿದ್ದ ವಿಠ್ಠಲ ದೇವಸ್ಥಾನವು ಪೂರ್ಣವಾಗಿ ಕಾಣಿಸಿಕೊಂಡು ಕೆಲ ದಿನಗಳ ಮಟ್ಟಿಗೆ ಜನರನ್ನು ಆಕರ್ಷಿಸಿತು. ಈ ವರ್ಷ ಮಳೆ ಕೊರತೆಯಿಂದಾಗಿ ಜಲಾಶಯವು ಬರಿದಾಗಿದ್ದರಿಂದ ಒಂದು ತಿಂಗಳವರೆಗೆ ಪೂರ್ಣವಾಗಿ ಕಾಣಿಸಿಕೊಂಡ ಈ ದೇವಸ್ಥಾನಕ್ಕೆ ಲಕ್ಷಾಂತರ ಭಕ್ತರು ಭೇಟಿ ನೀಡಿದ್ದಾರೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿಡಕಲ್‌ನ ರಾಜಾ ಲಖಮನಗೌಡ ಜಲಾಶಯವು 1977ರಲ್ಲಿ ನಿರ್ಮಾಣಗೊಂಡ ಬಳಿಕ ಜಲಾಶಯದ ಹಿನ್ನೀರಿನಲ್ಲಿ 22 ಗ್ರಾಮಗಳು ಮುಳುಗಡೆಯಾಗಿದ್ದವು. ಅದರಲ್ಲಿ ಡ್ಯಾಂಗೆ ಅತೀ ಹತ್ತಿರದಲ್ಲಿದ್ದ ಹುನ್ನೂರ ಗ್ರಾಮ ಸಹ ಒಂದು. ಹುನ್ನೂರ ಗ್ರಾಮಸ್ಥರು ತಮ್ಮೂರಿನಲ್ಲಿ 1928ರಲ್ಲಿ ನಿರ್ಮಿಸಿದ್ದ ವಿಠ್ಠಲ ದೇವಸ್ಥಾನವು ಘಟಪ್ರಭೆಯ ಒಡಲು ಸೇರಿತ್ತು.

48.3 ಮೀಟರ್ ಎತ್ತರವಿರುವ ಮತ್ತು 51 ಟಿಎಂಸಿ ನೀರಿನ ಸಾಮರ್ಥ್ಯವುಳ್ಳ ಹಿಡಕಲ್ ಜಲಾಶಯವು ವರ್ಷವಿಡೀ ತುಂಬಿಕೊಂಡಿರುತ್ತದೆ. ಹೀಗಾಗಿ ಮುಳುಗಿಹೋಗಿದ್ದ ವಿಠ್ಠಲ ದೇವಸ್ಥಾನದ ದರ್ಶನ ದೊರೆಯುವುದೇ ಅಪರೂಪ. ಬೇಸಿಗೆ ಸಂದರ್ಭದಲ್ಲಿ ಗೋಪುರ, ಗೋಡೆಗಳು ಅಲ್ಪಸ್ವಲ್ಪವೇ ಕಾಣಿಸುತ್ತಿದ್ದವು. ಈ ವರ್ಷ ಮುಂಗಾರು ಪೂರ್ಣ ಕೈಕೊಟ್ಟಿದ್ದರಿಂದ ಜಲಾಶಯದಲ್ಲಿ ಮುಳುಗಿದ್ದ ದೇವಸ್ಥಾನವು ಹಲವು ದಶಕಗಳ ನಂತರ ಪೂರ್ಣವಾಗಿ ಕಾಣಿಸಿಕೊಂಡಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಎಲ್ಲೆಡೆ ಸುದ್ದಿ ಹರಡಿದ್ದರಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಸಾಗರೋಪಾದಿಯಲ್ಲಿ ಜನರು ಆಗಮಿಸಿ ವಿಠ್ಠಲನ ದರ್ಶನ ಪಡೆದರು. ಈ ದೇವಸ್ಥಾನದ ಹೊರತು ಮುಳುಗಡೆಯಾದ ಕಟ್ಟಡಗಳ ಹಾಗೂ ದೇವಸ್ಥಾನಗಳ ಸುಳಿವು ಇಲ್ಲಿ ಸಿಗದಿರುವುದು ದೇಗುಲ ನಿರ್ಮಾಣದ ವಿಶೇಷವಾಗಿದೆ.

**ವಿಶೇಷತೆ:** 95 ವರ್ಷಗಳ ಪೂರ್ವದಲ್ಲಿ ನಿರ್ಮಿಸಿದ್ದ ಮತ್ತು ನಾಲ್ಕೂವರೆ ದಶಕಗಳಿಂದ ಘಟಪ್ರಭೆಯ ಒಡಲಲ್ಲಿದ್ದ ಈ ದೇವಸ್ಥಾನದ ಗರ್ಭಗುಡಿ, ಅಷ್ಟಕೋನಾಕೃತಿಯ 40 ಅಡಿ ಎತ್ತರದ ಗೋಪುರ, ಸಾಲು ಸಾಲು ಪೌಳಿ, ಚಾಲುಕ್ಯ ಶೈಲಿಯ ಏಕಶಿಲೆಯಲ್ಲಿ ನಿರ್ಮಿಸಿರುವ ಕಂಬಗಳು ಎಲ್ಲಿಯೂ ಮುಕ್ಕಾಗದೆ ಗಟ್ಟಿಮುಟ್ಟಾಗಿವೆ. ಒಂದು ಕಲ್ಲಿಗೆ ಮತ್ತೊಂದು ಕಲ್ಲನ್ನು ಸೇರಿಸಿ (ಇಂಟರ್‌ಲಾಕ್ ವ್ಯವಸ್ಥೆ) ನಿರ್ಮಾಣ ಮಾಡಿರುವ ಈ ದೇಗುಲಕ್ಕೆ ಪರ್ಯಾಯವಾಗಿ ಕೆಂಪು ಮತ್ತು ಬಿಳಿ ಮಿಶ್ರಿತ ಕಲ್ಲಿನಲ್ಲಿ 1998ರಲ್ಲಿ ನಿರ್ಮಿಸಲಾಗಿದೆ.

ಪ್ರಸ್ತುತ ಜುಲೈ 15ರಿಂದ ಬಿಟ್ಟುಬಿಡದೆ ಮಳೆ ಸುರಿಯುತ್ತಿದ್ದು, ಬರಿದಾಗಿದ್ದ ಜಲಾಶಯದ ಒಡಲು ತುಂಬುತ್ತಿದೆ. ದೇವಸ್ಥಾನವು ಮತ್ತೆ ಹಂತ ಹಂತವಾಗಿ ನೇಪಥ್ಯಕ್ಕೆ ಸರಿಯುತ್ತಿದೆ.

**–ಬಾಲಶೇಖರ ಬಂದಿ, ಮೂಡಲಗಿ**

